# ಕರ್ನಾಟಕ ವಿಧಾನ ಪರಿಷತ್ತು

## ಲಘು ಪ್ರಕಟಣೆ

**(ಸಾಂಸದಿಕ ಹಾಗೂ ಇತರ ವಿಷಯಗಳಿಗೆ ಸಂಬಂಧಿಸಿದ ಸಾಮಾನ್ಯ ಮಾಹಿತಿ)**

**27ನೇ ನವೆಂಬರ್, 2025**

ಸಂಖ್ಯೆ:47

**ಬೆಳಗಾವಿಯ ಸುವರ್ಣ ವಿಧಾನಸೌಧದಲ್ಲಿ ನಡೆಯುವ ಅಧಿವೇಶನದ ಸಂಬಂಧ ಮಾನ್ಯ ಶಾಸಕರುಗಳ ಮಾಹಿತಿಗಾಗಿ**

*****

ವಿಧಾನ ಪರಿಷತ್ತಿನ 157ನೇ ಅಧಿವೇಶನವು ದಿನಾಂಕ:08.12.2025 ರಿಂದ 19.12.2025 ರವರೆಗೆ ಬೆಳಗಾವಿಯ ಸುವರ್ಣ ವಿಧಾನಸೌಧದಲ್ಲಿ ನಡೆಯಲಿರುವುದರಿಂದ ವಿಧಾನ ಪರಿಷತ್ತಿನ ಸಚಿವಾಲಯವು ದಿನಾಂಕ:06.12.2025 ರಿಂದ ಬೆಳಗಾವಿಯ ಸುವರ್ಣ ವಿಧಾನ ಸೌಧದಲ್ಲಿ ಕಾರ್ಯನಿರ್ವಹಿಸಲಿದೆ.

ಅಧಿವೇಶನದಲ್ಲಿ ಪಾಲ್ಗೊಳ್ಳುವ ಮಾನ್ಯ ಶಾಸಕರುಗಳಿಗೆ ಬೆಳಗಾವಿ ನಗರದ ಹೋಟೆಲ್‌ಗಳಲ್ಲಿ ದಿನಾಂಕ:07.12.2025 ರಿಂದ ಕೊಠಡಿಗಳನ್ನು ಕಾಯ್ದಿರಿಸಲಾಗಿದೆ. ವಸತಿ ಸೌಕರ್ಯದ ಮಾಹಿತಿಯನ್ನು ಶ್ರೀಮತಿ ಸಿ ಟಿ ರೂಪ, ಕ್ಷೇತ್ರಾಧಿಕಾರಿ (ಮೊಬೈಲ್ ದೂರವಾಣಿ ಸಂಖ್ಯೆ:9035057680) ಇವರಿಂದ ಪಡೆದುಕೊಳ್ಳಲು ಕೋರಲಾಗಿದೆ.

ಅಧಿವೇಶನದಲ್ಲಿ ಪಾಲ್ಗೊಳ್ಳುವ ಮಾನ್ಯ ಶಾಸಕರುಗಳ ಜೊತೆಯಲ್ಲಿ ಆಗಮಿಸುವ ಆಪ್ತ ಸಹಾಯಕರುಗಳು ಹಾಗೂ ವಾಹನ ಚಾಲಕರುಗಳಿಗೆ ಮತ್ತು ಅಂಗರಕ್ಷಕರಿಗೆ ಪಾವತಿ ಆದಾರದ ಮೇಲೆ ವಸತಿ ವ್ಯವಸ್ಥೆಯನ್ನು ಕಲ್ಪಿಸಲು ಹೋಟೆಲ್‌ನ ಕೊಠಡಿಗಳನ್ನು ಕಾಯ್ದಿರಿಸುವ ಸಲುವಾಗಿ ಮಾನ್ಯ ಶಾಸಕರುಗಳು ಮುಂಚಿತವಾಗಿ ತಮ್ಮ ಆಪ್ತ ಸಹಾಯಕರು, ವಾಹನ ಚಾಲಕರು ಮತ್ತು ಅಂಗರಕ್ಷಕರ ಮಾಹಿತಿಯನ್ನು ಬೆಳಗಾವಿಯ ಜಿಲ್ಲಾದಿಕಾರಿಯವರಿಗೆ ನೀಡಬೇಕೆಂದು ಕೋರಲಾಗಿದೆ.

ಅಧಿವೇಶನದ ಸಮಯದಲ್ಲಿ ಮಾನ್ಯ ಶಾಸಕರುಗಳಿಗೆ ಬೆಳಗಿನ ಉಪಹಾರವನ್ನು ಅವರುಗಳು ವಾಸ್ತವ್ಯ ಹೂಡಲಿರುವ ಹೋಟೆಲ್‌ಗಳಲ್ಲಿಯೇ ವ್ಯವಸ್ಥೆ ಮಾಡಲಾಗಿದ್ದು, ಮಧ್ಯಾಹ್ನದ ಊಟದ ವ್ಯವಸ್ಥೆಯನ್ನು ಸುವರ್ಣ ವಿಧಾನಸೌಧದಲ್ಲಿ ಏರ್ಪಡಿಸಲಾಗಿರುತ್ತದೆ. ರಾತ್ರಿ ಊಟದ ವ್ಯವಸ್ಥೆಯನ್ನು ಈ ಹಿಂದಿನಂತೆ ಮಾನ್ಯ ಶಾಸಕರುಗಳೇ ಮಾಡಿಕೊಳ್ಳಲು ಕೋರಲಾಗಿದೆ.

ಕಾರ್ಯದರ್ಶಿ–2
ಕರ್ನಾಟಕ ವಿಧಾನ ಪರಿಷತ್ತು.

**ವಿಧಾನ ಪರಿಷತ್ತಿನ ಎಲ್ಲಾ ಮಾನ್ಯ ಶಾಸಕರುಗಳಿಗೆ,**